ಹೇಳುವಂಥಾದ್ದು ಏನೂ ಉಳಿದಿಲ್ಲ ನಿಮಗೆ' ಎಂದು, 'ಸ್ವಾಮಿ ನೀವು ಯಾರು ಎಂದು ನನಗೆ ಯಾಕೋ ನೆನಪಾಗಲೊಲ್ಲದು! ಒಂದೆರಡು ಬಾರಿ ನಿಮ್ಮನ್ನು ನಾನು ನೋಡಿದ ನೆನಪು ಇದೆ' ಎಂದು ಸದಾಶಿವ ಶೆಟ್ಟರ ಪರಿಚಯಕ್ಕೆ ಮುಂದಾದರು.

ಸದಾಶಿವಶೆಟ್ಟರು ತಾನು ಇಂಥವ ಎಂದು ಹೇಳಲು ಮುಂದಾಗುತ್ತಿದ್ದಂತೆ ಸರೋಜ ನಡುವೆ ಬಾಯಿ ಹಾಕಿ, 'ಅಣ್ಣ ಇವರು ಸದಾಶಿವಶೆಟ್ಟರು ಅಂತ. ರಾಂಪುರದಲ್ಲಿ ನಮ್ಮ ಯಜಮಾನರಿಗೆ ಆದ ಪರಿಚಯ ಮುಂದೆ ಸ್ನೇಹಕ್ಕೆ ತಿರುಗಿ ಆಮೇಲೆ ಈಗ ಅವರು ನಮ್ಮ ಕುಟುಂಬದ ಒಬ್ಬ ಸದಸ್ಯರೇ ಆಗಿದ್ದಾರೆ. ನಾವು ರಾಂಪುರದಿಂದ ಸೀತಾಪುರಕ್ಕೆ ಬಂದೆವಲ್ಲ, ಅದಕ್ಕೆ ಪರೋಕ್ಷ ಕಾರಣ ಇವರೇ. ಅಂದರೆ ಇವರ ಸೀತಾಪುರದ ಮನೆಯ ಹತ್ತಿರ ಹೊಸತಾಗಿ ನಿರ್ಮಾಣವಾಗುತ್ತಿದ್ದ ಮನೆಯನ್ನು ಇವರೇ ನಮಗೆ ವಿಕ್ರಯಿಸಿಕೊಟ್ಟದ್ದರಿಂದ ನಾವು ಸೀತಾಪುರಕ್ಕೆ ಬರುವುದು ಸುಲಭವಾಯಿತು' ಎಂದು ಶೆಟ್ಟರ ಬಗ್ಗೆ ಶಿಫಾರಸ್ಸು ಮಾಡಿ, 'ನೀನು ರಾಂಪುರಕ್ಕೆ ಬಂದಿದ್ದಾಗ ಖಂಡಿತ ಇವರನ್ನು ನೋಡಿಯೇ ಇರುತ್ತಿ! ಯಾಕೆಂದರೆ ಕಳೆದ ಎರಡು ವರ್ಷದಿಂದ ರಾಂಪುರದಲ್ಲಿ ಇವರು ನಿನ್ನ ಭಾವನ ವಾಕಿಂಗ್ ಮೇಟ್' ಎಂದು ನಗುತ್ತಾ ಹೇಳಿ – 'ಮತ್ತೆ ನಾವು ಸೀತಾಪುರದಲ್ಲಿ ಪುಟ್ಟ ಗೃಹಪ್ರವೇಶ ಮಾಡಿದ್ದೆವಲ್ಲ, ಅದು ಆದದ್ದೆಲ್ಲ ಇವರ ನೇತೃತ್ವದಲ್ಲೇ' ಎಂದರು.

ಸದಾಶಿವ ಶೆಟ್ಟರು ಕುಳಿತಲ್ಲಿಂದ ಮೆಲ್ಲ ಎದ್ದು ನಿಂತು, 'ತುಂಬಾ ಸಂತೋಷವಾಯಿತು ನಿಮ್ಮನ್ನು ನೋಡಿ! ನಮ್ಮ ಸರೋಜಕ್ಕ ಬನ್ನಿ ಎಂದದ್ದರಿಂದ ಹೊರಟು ಬಂದೆ' ಎಂದು ಸುಧೀರ್ ಶೆಟ್ಟರ ಕೈಕುಲುಕಿದರು.

ಸುಧೀರ ಶೆಟ್ಟರು ಅತಿಥಿಗಳ ಜೊತೆ ಮಾತಿಗೆ ಇಳಿದರು ಅವರ ಮಾತುಗಳನ್ನು ಕೇಳುತ್ತಿದ್ದ ಹಾಗೆ ಸದಾಶಿವ ಶೆಟ್ಟರಿಗೆ ಅವರ ಸೈನಿಕ ಜೀವನದ ಅನುಭವಗಳನ್ನು ಕೇಳುವ ಉತ್ಸಾಹ ಮೂಡಿತು. ಸುಮಾರು ಒಂದು ಗಂಟೆಯ ತನಕ ಆ ಬದುಕಿನ ಚಿತ್ರಣವನ್ನು ಸುಧೀರ್ ಶೆಟ್ಟರು ತೆರೆದಿಟ್ಟರು.

ರಾಯರು 'ನಿಮ್ಮ ಈ ಅನುಭವಗಳನ್ನೆಲ್ಲ ಹಿಂದೆ ಅಲ್ಪ ಸ್ವಲ್ಪ ಕೇಳಿದ್ದೆ. ಈಗ ಪೂರ್ತಿ ಕೇಳಿದ ಹಾಗಾಯಿತು' ಎಂದರು. ಅದಕ್ಕೆ ದನಿಗೂಡಿಸಿದ ಸದಾಶಿವ ಶೆಟ್ಟರೂ 'ನನಗೂ ಈ ಅನುಭವ ಹೊಸದು. ರಾಯರಿಂದಾಗಿ ಒಂದು ಅದ್ಭುತ ಲೋಕದ ದರ್ಶನವಾಯಿತು' ಎಂದು ಸಂತೋಷ ವ್ಯಕ್ತಪಡಿಸಿದರು.

ಅಷ್ಟರಲ್ಲಿ ಸರೋಜ, 'ಎಷ್ಟು ಮಾತನಾಡುವುದು ನೀವು? ನಾವು ಬಂದು ಒಂದು ಗಂಟೆಯಾಯಿತು. ನೀವು ಏನು ಕುಡಿಯುತ್ತೀರಿ ಎಂದು ಅಣ್ಣನೂ ಕೇಳಲಿಲ್ಲ, ನಾನೂ ಕೇಳಲಿಲ್ಲ' ಎಂದು ನಗುತ್ತಾ 'ಈಗ ಹೇಳಿ, ಇದು ನನ್ನ ಅಣ್ಣನ ಮನೆ. ಇಲ್ಲಿ ನಿಮಗೆ ಬೇಕಾದ್ದನ್ನು ಮಾಡಿಕೊಡುವ ಹಕ್ಕು ನನಗಿದೆ' ಎಂದರು 'ಯಾವುದೂ ಬೇಡ' ಎಂದು ರಾಯರು ಮತ್ತು ಸದಾಶಿವಶೆಟ್ಟರು ಹೇಳುತ್ತಿದ್ದಂತೆ ಸುಧೀರ್ ಶೆಟ್ಟರು, 'ನೀವು ಬರುತ್ತೀರಿ ಎಂದು ಗೊತ್ತಾದ ಮೇಲೆ, ನಾನು ನಾಲ್ಕಾರು ಎಳನೀರು ತೆಗೆಸಿಟ್ಟಿದ್ದೇನೆ. ನಮ್ಮ ಮನೆಯ ಹಿಂದೆಯೇ ಬೆಳೆದ ಪಪ್ಪಾಯಿ ಹಣ್ಣನ್ನು ತುಂಡರಿಸಿ ಇಟ್ಟಿದ್ದೇನೆ. ಯಾವುದು ಬೇಕೋ ಅದನ್ನು ತೆಗೆದುಕೊಳ್ಳಿ' ಎಂದರು.

ಎಲ್ಲರೂ ಎಳನೀರಿಗೆ 'ಜೈ' ಎಂದರು. ಹಾಗೇ ಅವರೆಲ್ಲ 'ಪಪ್ಪಾಯಿ ಹಣ್ಣೂ ತಿನ್ನುತ್ತೇವೆ' ಎನ್ನುವಾಗ ಎರಡು ಪ್ಲೇಟು ತುಂಬ ತುಂಡರಿಸಿದ ಪಪ್ಪಾಯಿ ಹಣ್ಣನ್ನು ಸುಧೀರ ಶೆಟ್ಟರು ತಂದಿಟ್ಟು, 'ಏನದು, ನಿಮ್ಮ ಮನೆಗೆ ರೌಡಿಗಳು ನುಗ್ಗಿದ ವಿಷಯ? ಪತ್ರಿಕೆಯಲ್ಲಿ ಬಂದದ್ದು ನೋಡಿ ನನಗೆ ಗಾಬರಿಯಾಯಿತು' ಎಂದರು.

ರಾಯರು 'ಅಂಥದೇನೂ ಇಲ್ಲ. ಸ್ವಲ್ಪ ಎಡವಟ್ಟಾದ ಹಾಗೆ ಆಗಿದೆ. ಆದರೆ ನಿಮ್ಮ ತಂಗಿ ಈಗ ನಾವಿರುವ ಊರೇಬಿಟ್ಟು ಹೋಗೋಣ ಅನ್ನುತ್ತಿದ್ದಾಳೆ! ನೀವು ಸ್ವಲ್ಪ ಬುದ್ಧಿ ಹೇಳಿ ಅವಳಿಗೆ' ಎಂದರು ಸರೋಜಳ ಕಡೆನೋಡಿ.

ಸುಧೀರ ಶೆಟ್ಟರು 'ಊರು ಬಿಡೋದಾ? ರಾಮ ರಾಮಾ! ಎಂಥ ಹೆದರುಪುಕ್ಕಲು ಸರೋಜ ನೀನು? ನಿನ್ನ ಅಣ್ಣ ಮಿಲಿಟ್ರಿಮ್ಯಾನ್ ಎನ್ನುವುದು ಗೊತ್ತಿದ್ದು ಹೀಗೆ ಹೆದರಿದರೆ ಹೇಗೆ?' ಎಂದು ನಕ್ಕರು.

ಸರೋಜಮ್ಮ 'ನಿನಗೇನು ಗೊತ್ತಣ್ಣ ನನ್ನ ಕಷ್ಟ? ಅಲ್ಲ, ಇದ್ದಕ್ಕಿದ್ದ ಹಾಗೆ ರಾತ್ರೆ ನಾಲ್ಕು ಗೂಂಡಾಗಳು ಬಾಗಿಲು ಬಡಿದು ಒಳಗೆ ನುಗ್ಗಿದರೆ ನಾನಲ್ಲ, ನೀನೂ ಹೆದರಬೇಕು' ಎಂದರು ಅಳುಮೋರೆಯಲ್ಲಿ.

ಸದಾಶಿವಶೆಟ್ಟರು ನಡುವೆ ಬಾಯಿ ಹಾಕಿ, 'ಸರೋಜಕ್ಕ ಹೆದರಿದ್ದು ಸಹಜ. ಆದರೆ ಪೋಲೀಸ್ ಕಂಪ್ಲೇಂಟ್ ಇತ್ಯಾದಿ ಕೊಟ್ಟ ಮೇಲೆ ಈಗ ಅವರಿಗೆ ಧೈರ್ಯ ಬಂದಿದೆ. ಪ್ರಾಯಃ ಅವರು ಖಂಡಿತ ಸೀತಾಪುರ ಬಿಡುವುದಿಲ್ಲ ಅನ್ನಬಹುದು' ಎಂದು ನಕ್ಕರು.

ಸರೋಜಮ್ಮ 'ನೀವು ಏನೇ ಹೇಳಿದರೂ ನಾನು ಊರು ಬಿಡುವವಳೇ. ಆದರೂ ಒಂದು ಮಾತು, ನಾನು ಈಗಿರುವ ಊರು ಬಿಡದೇ ಇರಬೇಕಾದರೆ ನಿಮ್ಮ ಭಾವ ಅಲ್ಲಿ ಇಲ್ಲಿ ಎಂದು ಭಾಷಣಕ್ಕೆ ಹೋಗುವುದನ್ನು ನಿಲ್ಲಿಸಬೇಕು ಮತ್ತು ಹಿಂದೂಧರ್ಮವನ್ನು ಲೇವಡಿ ಮಾಡಬಾರದು' ಎಂದು ಹೇಳುವಷ್ಟರಲ್ಲಿ ರಾಯರು, 'ನಾನು ಊರು ಬಿಟ್ಟರೂ ಸರಿ, ಬಾಯಿ ಇಲ್ಲದವನ ಹಾಗೆ ಈ ಊರಲ್ಲಿ ಬದುಕಲಾರೆ' ಎಂದರು ಗಂಭೀರವಾಗಿ.

ಸುಧೀರ ಶೆಟ್ಟರು 'ಊರು ಬಿಡುವುದು ಅಥವಾ ಬಿಡದೇ ಇರುವುದು ಪ್ರಕೃತ ಎರಡೂ ಒಂದೇ ಎನ್ನುವಂತಾಗಿದೆ ಈಗ ನಿಮ್ಮಿಬ್ಬರಲ್ಲಿ. ನಾನು ಈ ವಿಚಾರದಲ್ಲಿ ಏನೂ ಹೇಳಲಾರೆ. ಆದರೆ ನಿಧಾನವಾಗಿ ಈ ವಿಚಾರವನ್ನು ಕುಳಿತು ಪರಿಶೀಲಿಸಬೇಕು. ಇಷ್ಟಕ್ಕೂ ನೀವು ಈ ರೌಡಿಗಿವುಡಿಗಳಿಗೆಲ್ಲ ಹೆದರಬೇಕಾಗಿಲ್ಲ. ಸ್ವಂತ ರಕ್ಷಣೆಗೆ ಅಂತ ರಿವಾಲ್ವರ್‌ಗೆ ಅಪ್ಲೈ ಮಾಡಿ. ನಿಮ್ಮ ತಹಸೀಲ್ದಾರರು ನನಗೆ ಗೊತ್ತು. ಹಾಗೇ ಕಾರ್ಕಳದ ಎಸ್.ಐ. ಅವರೂ ಖಂಡಿತ ಶಿಫಾರಸ್ಸು ಮಾಡುತ್ತಾರೆ. ಪ್ರಾಯಶಃ ಅದರ ಮಂಜೂರಾತಿಗೆ, ಜಿಲ್ಲಾ ದಂಡಾಧಿಕಾರಿ ಅಂದರೆ ಜಿಲ್ಲಾಧಿಕಾರಿಯವರ ಆದೇಶಕ್ಕೆ ಹೋಗಬೇಕಾಗುತ್ತದೆ' ಎಂದು ಮಾತು ನಿಲ್ಲಿಸಿ, 'ನಿಮ್ಮಲ್ಲಿ ರಿವಾಲ್ವರ್ ಇದೆ ಅಂದರೆ ಮತ್ತೆ ನಿಮ್ಮನ್ನು ಅಟ್ಯಾಕ್ ಮಾಡಲಿಕ್ಕೆ ರೌಡಿಗಳು ಖಂಡಿತ ಹೆದರುತ್ತಾರೆ' ಎಂದರು.

ರಾಯರು 'ಗುಡ್ ಸಜೆಶನ್. ಲೆಟ್ ಅಸ್ ಟ್ರೈ' ಎಂದು ಸುಮ್ಮನಾದರು.

ತಕ್ಷಣ ಸದಾಶಿವ ಶೆಟ್ಟರು 'ಲೆಟ್ ಅಸ್ ಟ್ರೈ' ಅಂದರೆ ಸಾಲದು ರಾಯರೇ. ನಾಳೆ ನಾಡಿದರಲ್ಲಿ ನಾವು ಕಾರ್ಕಳಕ್ಕೆ ಹೋಗಿ ಎಸ್.ಐ. ಅವರಲ್ಲಿ ಪ್ರೊಸೀಜರ್ಸ್ ಏನು ಎಂದು ವಿಚಾರಿಸುವ' ಎಂದರು.

ಸರೋಜಮ್ಮ ಅದು ತನಗೆ ಸಂಬಂಧಪಟ್ಟದ್ದು ಅಲ್ಲವೋ ಎನುವಂತೆ ಅಣ್ಣ ಸುಧೀರ್ ಶೆಟ್ಟರಲ್ಲಿ 'ನೋಡಣ್ಣ ಯಾವಾಗ ನೋಡಿದರೂ ಇವರು ದೇವರಿಲ್ಲ ಅನ್ನೋದು! ನಮ್ಮ ದೇವಾಧಿದೇವತೆಗಳನ್ನು ನಾವೇ ಸೃಷ್ಟಿಸಿರೋದು ಅನ್ನೋದು! ನಮ್ಮ ದೈವ ದೇವರ ನಂಬಿಕೆಗಳನ್ನು ಸುಮ್‌ಸುಮ್ಮನೆ ಲೇವಡಿ ಮಾಡೋದು, ಮನೆಯಲ್ಲಿ ಇದು ದಿನನಿತ್ಯದ ಪಾರಾಯಣ! ಇರಲಿ ಬಿಡಿ ಅಂದರೆ ಸಾಲದು ಎನ್ನುವಂತೆ ಭಾಷಣಕ್ಕೆ ಕರೆದಲ್ಲೂ ಇವರು ಹೀಗೆ ಮಾತನಾಡಿದರೆ ನಾನು ಹೆಂಡತಿ ಎಂದು ಇವರನ್ನು ಸಹಿಸಿಕೊಂಡ ಹಾಗೆ ಊರ ಜನ ಸಹಿಸಿಕೊಳ್ಳುತ್ತಾರಾ? ನೀನು ಅವರಿಗೆ ಒಂದಷ್ಟು ತಿಳಿಹೇಳಬೇಕು ಇವರೆಲ್ಲ ಬುದ್ಧಿಜೀವಿಗಳಲ್ಲವೇ?' ಎಂದು ಗಂಡನನ್ನು ಲೇವಡಿ ಮಾಡಿದರು.

ಸುಧೀರ್ ಶೆಟ್ಟರು ಮಾತನಾಡಲಿಲ್ಲ. ಸುಮ್ಮನೇ ನಕ್ಕು, 'ಅದು ಅವರ ಅಭಿಪ್ರಾಯ ಸರೋಜ. ಆ ಅಭಿಪ್ರಾಯವನ್ನು ಒಪ್ಪುವವರು ತಾನೇ ಅವರನ್ನು ಸಭೆ ಸಮಾರಂಭಗಳಿಗೆ ಕರೆಯೋದು? ಇದರಿಂದಾಗಿ ಅವರು ಹೇಳುವುದರಲ್ಲಿ ಅರ್ಥ ಇದೆ ಎಂದಮೇಲೆ ಅದು ಮುಗಿಯಿತು' ಎಂದು ಮಾತು ಮುಗಿಸಿದರು. ಆ ತನಕ ಸುಮ್ಮನಿದ್ದ ರಾಯರು, 'ನೋಡಿ ಭಾವ, ನನಗೆ ಬುದ್ಧಿಜೀವಿ ಎಂಬ ಯಾವ ಭ್ರಮೆಯೂ ಇಲ್ಲ! ಹಾಗೇ ನಾನು ಖಂಡಿತ ಧರ್ಮ–ದೇವರ ವಿರೋಧಿಯೂ ಅಲ್ಲ. ಧರ್ಮ ಎನ್ನುವುದನ್ನು ಮತ್ತು ದೇವರನ್ನು ಕೂಡಾ ನಾವು ತಪ್ಪಾಗಿ ಅರ್ಥೈಸಿಕೊಂಡಿದ್ದೇವೆ ಎನ್ನುವುದು ನನ್ನ ವಾದ. ಭಾರತೀಯ ಸಂಸ್ಕೃತಿ ಎನ್ನುವುದು ಬೇರೆ, ನಾವು ಆಚರಣೆಯಲ್ಲಿ ಧರ್ಮ ಎನ್ನುವ ಪರಿಕಲ್ಪನೆ ಬೇರೆ ಎನ್ನುವುದು ನನ್ನ ತರ್ಕ. ಉದಾಹರಣೆಗೆ, ನಾವು ಸಂಸ್ಕೃತ ಭಾಷೆಯನ್ನು ಧಾರ್ಮಿಕ ನೆಲೆಯಲ್ಲಿ ಅಂದರೆ ನಮ್ಮ ಧರ್ಮಗ್ರಂಥಗಳೆಲ್ಲ ಮೂಲದಲ್ಲಿ ಸಂಸ್ಕೃತದಲ್ಲಿವೆ ಎಂಬ ಕಾರಣಕ್ಕೆ ಸಂಸ್ಕೃತವು ಶ್ರೇಷ್ಠ ಎಂದು ಒಪ್ಪಿಕೊಳ್ಳುತ್ತೇವೆ! ಆದರೆ ಅದನ್ನು ಮೃತಭಾಷೆ ಮತ್ತು ಬ್ರಾಹ್ಮಣರ ಭಾಷೆ ಅನ್ನುವವರೂ ಇದ್ದಾರೆ. ವಾಸ್ತವವಾಗಿ ಅದು ಹಾಗಲ್ಲ. ಮತ್ತಿನ್ನೇನು ಅಂದರೆ ಸಂಸ್ಕೃತವು ಕಂಪ್ಯೂಟರಿಗೆ ಒಗ್ಗಿಕೊಳ್ಳುವ ಭಾಷೆಗಳಲ್ಲಿ ಹೆಚ್ಚು ಪ್ರಾಧಾನ್ಯ ಪಡೆದಿದೆ ಎನ್ನುವವರೂ ಇಲ್ಲದಿಲ್ಲ! ಅಮೆರಿಕದ 'ನಾಸಾ' ಎನ್ನುವ ಬಾಹ್ಯಾಕಾಶ ಸಂಸ್ಥೆಯಲ್ಲಿ ಅನ್ವೇಷಣೆ ಸಂಶೋಧನೆ ಕೈಗೊಳ್ಳುವವರಿಗೆ ಸಂಸ್ಕೃತ ಕಡ್ಡಾಯವಾಗಿ ಗೊತ್ತಿರಬೇಕು ಎನ್ನುತ್ತದಂತೆ ಆ ಸಂಸ್ಥೆ. ಹಾಗೆಂದು ಆ ಸಂಸ್ಕೃತ ಭಾಷೆ ಹುಟ್ಟಿಕೊಳ್ಳುವ ಕಾಲದಲ್ಲಿ ಕಂಪ್ಯೂಟರ್ ಇತ್ತು ಎಂದು ಮಾತನಾಡಿಕೊಂಡರೆ ಅದು ಮೂರ್ಖತನದ ಪರಮಾವಧಿ ಅಥವಾ ಭಾರತೀಯ ಧರ್ಮವು ಸಂಸ್ಕೃತದಲ್ಲಿದೆ ಎನ್ನುವ ಕಾರಣದಿಂದ ಸಂಸ್ಕೃತ ಶ್ರೇಷ್ಠ ಅಂದರೆ ಅದು ಹಾಸ್ಯಾಸ್ಪದ. ಆದರೆ ಧರ್ಮದಂಥ ಸಂಕೀರ್ಣ ವಿಚಾರಗಳನ್ನು